RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**



| ಭಾಗ-I<br>Part-I | ಬೆಂಗಳೂರು, ಬುಧವಾರ, ಜನವರಿ ೩, ೨೦೧೮ (ಪುಷ್ಯ ೧೩, ಶಕ ವರ್ಷ ೧೯೩೯)<br>Bengaluru, Wednesday, January 3, 2018 (Pushya 13, Shaka Varsha 1939) | ನಂ. ೧೭<br>No. 17 |
|---|---|---|



**ಕರ್ನಾಟಕ ಸರ್ಕಾರದ ನಡವಳಿಗಳು**

**ಆರ್ಥಿಕ ಸಚಿವಾಲಯ**

**ವಿಷಯ:** ತೆರಿಗೆ ತಪ್ಪಿಸುವವರ ಬಗ್ಗೆ ಸುಳಿವು ನೀಡುವವರಿಗೆ ಪುರಸ್ಕಾರ ನೀಡುವ ಯೋಜನೆಯನ್ನು 2017-18ರಿಂದ 2019-20ನೇ ಸಾಲುಗಳವರೆಗೆ ವಿಸ್ತರಿಸುವ ಕುರಿತು.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ:ಆಇ 72 ಸಿಇಎಕ್ಸ್ 1984, ದಿನಾಂಕ 28/02/1985.
2. ಸರ್ಕಾರದ ಆದೇಶ ಸಂಖ್ಯೆ:ಆಇ 165 ಸಿಎಸ್ಒ 1994, ದಿನಾಂಕ 12/12/1994.
3. ಸರ್ಕಾರದ ಆದೇಶ ಸಂಖ್ಯೆ:ಆಇ 199 ಸಿಎಸ್ಎಲ್ 2004, ದಿನಾಂಕ 07/09/2004.
4. ಸರ್ಕಾರದ ಆದೇಶ ಸಂಖ್ಯೆ:ಆಇ 388 ಸಿಎಸ್ಎಲ್ 2005, ದಿನಾಂಕ 30/08/2005.
5. ಸರ್ಕಾರದ ಆದೇಶ ಸಂಖ್ಯೆ:ಆಇ 419 ಸಿಎಸ್ಎಲ್ 2006, ದಿನಾಂಕ 07/03/2007.
6. ಸರ್ಕಾರದ ಆದೇಶ ಸಂಖ್ಯೆ:ಆಇ 419 ಸಿಎಸ್ಎಲ್ 2007, ದಿನಾಂಕ 16/11/2007 ಮತ್ತು ದಿನಾಂಕ 14/08/2008.
7. ಸರ್ಕಾರದ ಆದೇಶ ಸಂಖ್ಯೆ:ಆಇ 73 ಸಿಎಸ್ಎಲ್ 2009, ದಿನಾಂಕ 21/04/2010.
8. ಸರ್ಕಾರದ ಆದೇಶ ಸಂಖ್ಯೆ:ಆಇ 160 ಸಿಎಸ್ಎಲ್ 2012, ದಿನಾಂಕ 07/09/2012.
9. ಸರ್ಕಾರದ ಆದೇಶ ಸಂಖ್ಯೆ:ಆಇ 85 ಸಿಎಸ್ಎಲ್ 2016, ದಿನಾಂಕ 07/12/2016.
10. ವಾಣಿಜ್ಯ ತೆರಿಗೆಗಳ ಆಯುಕ್ತರ ಪತ್ರ ಸಂಖ್ಯೆ:ವಾತೆಅಆ (ಗು&ಸ)/ಉಆ/ಇತರೆ/ಹೆಚ್/ಸಿಆರ್-10/16-17, ದಿನಾಂಕ 22/03/2017, 21/06/2017 ಮತ್ತು 07/10/2017.

**ಪ್ರಸ್ತಾವನೆ:**

ಮೇಲೆ (1)ರಿಂದ (9)ರವರೆಗೆ ಓದಲಾದ ಸರ್ಕಾರದ ಆದೇಶಗಳಲ್ಲಿ, ತೆರಿಗೆ ತಪ್ಪಿಸುವವರ ಬಗ್ಗೆ ಸುಳಿವು ನೀಡುವವರಿಗೆ ಪುರಸ್ಕಾರ ನೀಡುವ ಯೋಜನೆಯನ್ನು ದಿನಾಂಕ 31/03/2017ರವರೆಗೆ ವಿಸ್ತರಿಸಲಾಗಿತ್ತು.

ಮೇಲೆ (10)ರಲ್ಲಿ ಓದಲಾದ ಪತ್ರದಲ್ಲಿ, ತೆರಿಗೆ ತಪ್ಪಿಸುವವರ ಬಗ್ಗೆ ಸುಳಿವು ನೀಡುವವರಿಗೆ ಪುರಸ್ಕಾರ ನೀಡುವ ಯೋಜನೆಯನ್ನು 2017-18ರಿಂದ 2019-20ನೇ ಸಾಲುಗಳಿಗೂ ವಿಸ್ತರಿಸುವಂತೆ ವಾಣಿಜ್ಯ ತೆರಿಗೆಗಳ ಆಯುಕ್ತರು ಕೋರಿರುತ್ತಾರೆ ಹಾಗೂ ಈ ಮೊತ್ತವನ್ನು ಈಗಾಗಲೇ ನೀಡಲಾಗಿರುವ “2040-00-001-0-01-015-Subsidiary Expenses (SE)” ಲೆಕ್ಕ ಶೀರ್ಷಿಕೆಯಡಿ ಭರಿಸಲಾಗುವುದೆಂದು ಹಾಗೂ ಪುರಸ್ಕಾರ ಧನವನ್ನು ರೂ.20,000/-ದಿಂದ ರೂ.50,000/-ದವರೆಗೆ ಹೆಚ್ಚಿಸಿದಲ್ಲಿ ಮಾಹಿತಿದಾರರು ಹೆಚ್ಚಿನ ಪ್ರಕರಣಗಳನ್ನು ಗುರುತಿಸಿ ಇಲಾಖೆಗೆ ಮಾಹಿತಿಯನ್ನು ನೀಡುವುದರಿಂದ ಸರ್ಕಾರಕ್ಕೆ ಹೆಚ್ಚಿನ ದಂಡ ಮತ್ತು ತೆರಿಗೆ ಸಂಗ್ರಹಿಸಲು ಅನುಕೂಲವಾಗುತ್ತದೆ ಎಂಬ ಅಂಶವನ್ನು ಸಹ ತಿಳಿಸಿರುತ್ತಾರೆ.